# ಮತ್ತೆ ದೇವನೂರು!



ಊರುಕೇರಿಯ ಕಥನಗಳನ್ನು ಹಾಗೂ ಅಲ್ಲಿನ ತವಕತಲ್ಲಣಗಳನ್ನು ಸಿನಿಮಾ ಮಾಡುವ ಅಪರೂಪದ ನಿರ್ದೇಶಕರ ಸಾಲಿಗೆ ಸೇರಿದವರು ಶಿವರುದ್ರಯ್ಯ. ಅವರ ಸಿನಿಮಾ ಬದ್ಧತೆಯ ಹೊಸ ಉದಾಹರಣೆ 'ಮಾರಿಕೊಂಡವರು'.

'ಮಾರಿಕೊಂಡವರು' 2015ರ ಸಾಲಿನಲ್ಲಿ ಎರಡನೇ ಅತ್ಯುತ್ತಮ ಚಿತ್ರ ರಾಜ್ಯಪ್ರಶಸ್ತಿಗೆ ಪಾತ್ರವಾಗಿರುವ ಸಿನಿಮಾ. ದೇವನೂರರ ಮೂರು ಕಥೆಗಳನ್ನಾಧರಿಸಿ ರೂಪುಗೊಂಡಿರುವುದು ಈ ಸಿನಿಮಾದ ಬಹು ಮುಖ್ಯವಾದ ವಿಶೇಷ. 'ಮಾರಿಕೊಂಡವರು', 'ಡಾಂಬರು ಬಂದುದು' ಹಾಗೂ 'ಗ್ರಸ್ತರು' ಕನ್ನಡ ಕಥಾಲೋಕದ ಅನರ್ಘ್ಯ ರತ್ನಗಳು. ದೇವನೂರರ ಈ ಮೂರೂ ಕಥೆಗಳನ್ನು ಸಂಯೋಜಿಸಿ ಶಿವರುದ್ರಯ್ಯನವರು ಸಿನಿಮಾ ರೂಪಿಸಿದ್ದಾರೆ.

ದುರ್ಬಲ ವರ್ಗದವರ ನೋವು ನಲಿವುಗಳ ಬಗ್ಗೆ ಚಿತ್ರೋದ್ಯಮ ಸಾಮಾನ್ಯವಾಗಿ ಉತ್ಸಾಹ ವ್ಯಕ್ತಪಡಿಸುವುದಿಲ್ಲ. ಹೀಗಿದ್ದರೂ ನಿರಂತರವಾಗಿ ಇಂಥಹುದೇ ಸಿನಿಮಾಗಳನ್ನು ಶಿವರುದ್ರಯ್ಯ ರೂಪಿಸುತ್ತಿದ್ದಾರೆ. ಅವರ ಈ ಸಿನಿಮಾ ಸಂಬಂಧಗಳ ಬಗ್ಗೆ ಮಾತನಾಡುತ್ತದೆ. ನಮ್ಮ ಜೊತೆಯಲ್ಲೇ ಇದ್ದರೂ ನಮ್ಮೊಡನೆ ಇಲ್ಲದಂತಿರುವ ಬದುಕುಗಳ ಕಥೆ ಚಿತ್ರದಲ್ಲಿದೆ. 'ಸಂಬಂಜ ಅನ್ನೋದು ದೊಡ್ಡದು ಕನಾ' ಎನ್ನುವ ದೇವನೂರು ಸಾಹಿತ್ಯದ ಬೀಜವಾಕ್ಯ ಸಿನಿಮಾದ ಆಶಯವೂ ಹೌದು. ದ್ಯಾವನೂರಿನ ಪರಿಸರವನ್ನು ಕಲಾ ನಿರ್ದೇಶಕ ಶಶಿಧರ ಅಡಪ ಚಿತ್ರದಲ್ಲಿ ಜೀವಂತಗೊಳಿಸಿದ್ದಾರಂತೆ.

ಸರ್ದಾರ್ ಸತ್ಯ, ಸೋನು ಗೌಡ, ಸಂಯುಕ್ತಾ ಹೊರನಾಡು ಹಾಗೂ ಸಂಚಾರಿ ವಿಜಯ್ರಂಥ ಜನಪ್ರಿಯ ನಟರು 'ಮಾರಿಕೊಂಡವರು' ಚಿತ್ರದಲ್ಲಿ ನಟಿಸಿದ್ದಾರೆ. ತಮಿಳಿನ ಸಲೀಲ್ ಕುಮಾರ್ ಚಿತ್ರದ ಪ್ರಮುಖ ಪಾತ್ರವೊಂದನ್ನು ಪೋಷಿಸಿದ್ದಾರೆ. ಆಗಸ್ಟ್ 18ರಂದು ತೆರೆಕಾಣಲಿರುವ ಈ ಸಿನಿಮಾ ದೇವನೂರರ ಕೃತಿಗಳನ್ನು ದೃಶ್ಯರೂಪದಲ್ಲಿ ನೆನಪಿಸಲಿದೆ.




"ಗಣಪನ ಹಬ್ಬ"

ವೈಭವ – ವೈವಿಧ್ಯತೆ – ವಿನೂತನ

Prasiddhi Silks

Finest in Quality Lowest in Price
Display of Our New Production
for this Gowri - Ganesha
at all our Stores

Silks, Cotton & Salwars

Prasiddhi SILKS

A renowned name for well known sarees

K.H. Road | M.G. Road | Bannerghatta Road
Commercial Street | Domlur | Marathahalli